ಅಧ್ಯಕ್ಷರು.—ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ಕೆ.ಜೆ. ಜಾರ್ಜ್ ಶಾಸಕರು, ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. ೧೪೯೫(ಬಿ)–

ಮಾರಾಟ ತೆರಿಗೆಯಿಂದ ಬರುವ ವರಮಾನ ಕುರಿತು

೧೪೯೫. ಶ್ರೀ ಕೆ. ಜೆ. ಜಾರ್ಜ್ (ಭಾರತಿನಗರ) —ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಾರಾಟ ತೆರಿಗೆಯಿಂದ ಪ್ರತಿ ವರ್ಷ ಸರ್ಕಾರಕ್ಕೆ ಬರುತ್ತಿರುವ ವರಮಾನ ಎಷ್ಟು ?

ಆ) ಈ ಪೈಕಿ ೧೯೮೩, ೧೯೮೪, ೧೯೮೫ನೇ ಇಸವಿಯಲ್ಲಿ ಸರ್ಕಾರಕ್ಕೆ ಬರಬೇಕಾಗಿರುವ ಬಾಕಿ ಎಷ್ಟು,

ಇ) ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಬಾಕಿ ನಿಲ್ಲಿಸಿಕೊಂಡಿರುವ ಜನ ಅಥವಾ ಕಂಪನಿಗಳೆಷ್ಟು ?

ಈ) ಇವರ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ. ಅವರ ಪೈಕಿ ಯಾರಿಗಾದರೂ ತೆರಿಗೆ ಬಾಕಿಯಿಂದ ಮನ್ನಾ ಮಾಡಲಾಗಿದೆಯೆ ?

ಉ) ಹಾಗಿದ್ದಲ್ಲಿ ಯಾರು ಯಾರಿಗೆ ನೀಡಲಾಗಿದೆ (ವಿವರಗಳನ್ನೊದಗಿಸಬೇಕಾಗಿ ವಿನಂತಿ)

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು) —.

ಅ) ಮಾರಾಟ ತೆರಿಗೆ ವರಮಾನ ಈ ರೀತಿ ಇದೆ.—

೧೯೮೨-೮೩	೧೯೮೩-೮೪	೧೯೮೪-೮೫
(ಕೋಟಿ ರೂ.ಗಳಲ್ಲಿ)		
೩೫೯.೮೫	೪೦೦.೮೫	೪೪೫.೩೫

ಆ) ೬೭.೦೧ ೧೩೦.೬೯ ೧೨೬.೧೯ (೫೧-೧೨-೧೯೮೪ರ ವರೆಗೆ)

ಇ) ಒಂದು ಲಕ್ಷಕ್ಕೂ ಮತ್ತು ಅದಕ್ಕೂ ಮೀರಿದ ಹೆಚ್ಚಿನ ಬಾಕಿ ಉಳಿಸಿಕೊಂಡಿರುವ ವ್ಯಕ್ತಿಗಳ ಕಂಪನಿಗಳ ಸಂಖ್ಯೆ ದಿನಾಂಕ ೫೧-೧೨-೧೯೮೪ರಂದು ೫೬೮ ಆಗಿತ್ತು.

ಈ) ಈ ಬಾಕಿ ವಸೂಲಾತಿಗೆ ಕರ್ನಾಟಕ ಮಾರಾಟ ತೆರಿಗೆ ಕಾಯಿದೆ ೧೯೫೭ರನ್ವಯ ಭೂ ಕಂದಾಯ ಬಾಕಿಯಂತೆ, ನ್ಯಾಯಾಲಯದ ಮೂಲಕ ಇಲಾಖಾ ವಸೂಲಿ ಅಧಿಕಾರಿಗಳ ಮೂಲಕ, ಬ್ಯಾಂಕಿನಲ್ಲಿರುವ ಹಣವನ್ನು ಮುಟ್ಟುಗೋಲು ಹಾಕುವುದರ ಮೂಲಕ ಕ್ರಮ ತೆಗೆದುಕೊಳ್ಳಲಾಗಿದೆ. ಯಾರ ವಾಣಿಜ್ಯ ತೆರಿಗೆ ಬಾಕಿಯನ್ನೂ ಮನ್ನಾ ಮಾಡಲಾಗಿಲ್ಲ.

ಉ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಕಾರ ಯೋಜನೆಗಳಿಗೆ ಸಾಕಷ್ಟು ಹಣದ ತೊಂದರೆಯನ್ನು ಅನುಭವಿಸುತ್ತಿರತಕ್ಕಂತಹ ಸಂದರ್ಭದಲ್ಲಿ, ಸುಮಾರು ೧೩೦ ಕೋಟಿ ರೂಪಾಯಿಗಳಿಗೂ ಹೆಚ್ಚು ಇವತ್ತು ಮಾರಾಟ ತೆರಿಗೆ ಎಂದು ಬಾಕಿ ಉಳಿದಿದೆ ಮತ್ತು ೧೯೮೨-೮೩ನೇ ಇಸವಿಯಲ್ಲಿ ಇದು ಸುಮಾರು ೬೭ ಕೋಟಿ ರೂಪಾಯಿ ಇತ್ತು. ೧೩೦ ಕೋಟಿ ರೂಪಾಯಿಗಳಿಗೂ ಹೆಚ್ಚು ಬಂದಿದೆ, ಈ ಸರ್ಕಾರ ಬಂದಮೇಲೆ ಮಾರಾಟ ತೆರಿಗೆ ಹೆಚ್ಚಾಗಿದೆ, ಕಾರಣವೇನೆಂದು ತಿಳಿಸಬೇಕು?

ಶ್ರೀ ರಾಮಕೃಷ್ಣ ಹೆಗಡೆ.—ಇದಕ್ಕೆ ಕಾರಣಗಳು ಅನೇಕ ಇವೆ. ಉದಾಹರಣೆಗೆ, ಅನೇಕ ಸಕ್ಕರೆ ಕಾರ್ಖಾನೆಗಳಿಗೆ ನಾವು ಮಾರಾಟ ತೆರಿಗೆಗೆ ಸಂಬಂಧಪಟ್ಟಂತೆ, ಡೆವಲಪ್‌ಮೆಂಟ್ ಲೋನ್ ಎಂದು ಕೊಟ್ಟಿದ್ದೇವೆ. ಇದು ದೊಡ್ಡ ಪೊತ್ತವಾಗಿದೆ. ೮೨-೮೩ನೇ ಇಸವಿಯಲ್ಲಿ ಕಾಫಿ ಬೋರ್ಡ್‌ನವರಿಂದ

ಬರಬೇಕಾದಂತಹ ಮೊರಾಟ ತೆರಿಗೆಯ ವಿಚಾರದಲ್ಲಿ ಆಗ ಹೈಕೋರ್ಟ್‌ನಿಂದ ತೀರ್ಮಾನ ಬಂದಿರಲಿಲ್ಲ, ಈಗ ಸೈಕೋರ್ಟ್ ನೀರ್ಮಾನವು ಬಂದಿರುವುದರಿಂದ ಸಂಬಾರು ೪೮-೪೯ ಕೋಟಿ ರೂಪಾಯಿಗಳು ಕಾಫಿಬೋರ್ಡ್‌ನಿಂದ ಬರಬೇಕೆಂದು ತೀರ್ಮಾನವಾಗಿದೆ. ಅಲ್ಲದೆ, ಅವರು ಸುಪ್ರೀಂ ಕೋರ್ಟ್‌ಗೆ ಹಾಕಿದ್ದಾರೆ. ಅದೂ ಒಂದು ದೊಡ್ಡ ಮೊತ್ತವಾಗಿದೆ. ಇದೇ ರೀತಿ ಅನೇಕ ಸಕ್ಕರೆ ಕಾರ್ಖಾನೆಗಳು ಕಳೆದ ೨-೩ ವರ್ಷಗಳಿಂದ ಒಳ್ಳೆಯ ಸ್ಥಿತಿಯಲ್ಲಿ ಇರದೇ ಇದ್ದುದರಿಂದ, ಲಕ್ಷಾಂತರ ರೂಪಾಯಿಗಳ ಮೊರಾಟ ತೆರಿಗೆ ಕೊಡಲು ಅವರಿಗೆ ಸಾಧ್ಯವಾಗಲಿಲ್ಲ. ಅವರು ಸಮಯ ಕೇಳಿದ್ದಾರೆ. ಆದುದರಿಂದ ಮೊತ್ತ ಹೆಚ್ಚಾಗಿದೆ.

ನಂಜನಗೂಡು ತಾಲ್ಲೂಕಿನ ಹುಲ್ಲಿಹಳ್ಳಿ, ಹಾಗೂ ರಾಂಪುರದಲ್ಲಿನ ನಾಲೆಗಳ ದುರಸ್ತಿ

೧೧೪೭. ಹೆಚ್. ಸಿ. ಮಹದೇವಪ್ಪ (ಟಿ. ನರಸೀಪುರ).—ಮಾನ್ಯ ಲೋಕೋಪಯೋಗಿ ಸಚಿವರ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಂಜನಗೂಡು ತಾಲ್ಲೂಕಿನ ಹುಲ್ಲಿಹಳ್ಳಿ, ರಾಂಪುರ. ನಾಲೆಗಳು ೧೦೦ ವರ್ಷದ ಹಳೆಯ ಕಾಲುವೆಗಳಾಗಿದ್ದು ಇವುಗಳ ದುರಸ್ತಿ ಬಗ್ಗೆ ಸರಕಾರದವರು ಆಲೋಚಿಸುತ್ತಿದ್ದಾರೆಯೆ,

ಆ) ಹಾಗಿದ್ದಲ್ಲಿ ದುರಸ್ತಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು,

ಇ) ದುರಸ್ತಿ ಕೆಲಸಕ್ಕೆ ಸುಮಾರು ಎಷ್ಟು ಹಣ ಖರ್ಚಾಗಬಹುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕಾಲುವೆಗಳು ಹಳೆಯದಾಗಿದ್ದು ದುರಸ್ತಿಯು ಅಗತ್ಯವಾಗಿದೆ.

ಆ) ಈ ವಿಷಯದ ಬಗ್ಗೆ ಅನ್ವೇಷಣಾ ಕಾರ್ಯವು ಪ್ರಗತಿಯಲ್ಲಿವೆ. ಅದು ಪೂರ್ಣಗೊಂಡ ನಂತರ ಅದಾಂಜನ್ನು ಹಾಗೂ ನಕ್ಷೆಗಳನ್ನು ಸಿದ್ಧಪಡಿಸಲಾಗುವುದು. ಅಂದಾಜಿಗೆ ಆಡಳಿತ ಮಂಜೂರಾತಿ ದೊರಕಿದ ನಂತರ ಕಾಮಗಾರಿಗಳನ್ನು ಕೈ ಗೊಳ್ಳಲಾಗುವುದು,

ಇ) ಅನ್ವೇಷಣಾ ಮುಗಿದ ನಂತರ ತಗಲುವ ವೆಚ್ಚ ಗೊತ್ತಾಗುವುದು.

ಶ್ರೀ ಹೆಚ್. ಸಿ. ಮಹದೇವಪ್ಪ.—ಮಾನ್ಯ ಅಧ್ಯಕ್ಷರೇ, ಕಾಲುವೆಗಳೆಲ್ಲಾ ಹಳೆಯಾದವಾಗಿದ್ದು ದುರಸ್ತಿಯು ಅಗತ್ಯವಾಗಿದೆಯೆಂದು ಮಾನ್ಯ ಸಚಿವರು ಹೇಳಿದ್ದಾರೆ. ಈ ಹಳೆಯಾದಾದ ಕಾಲುವೆಗಳನ್ನೆಲ್ಲ ಹಂತ ಹಂತವಾಗಿ ರಿಲೀಫ್ ಕಾಮಗಾರಿ ಮೂಲಕ ದುರಸ್ತಿ ಮಾಡಲು ಹಣವನ್ನು ಮಂಜೂರು ಮಾಡಬೇಕೆಂದು ತಮ್ಮ ಮೂಲಕ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಸಚಿವರು).—ಸ್ವಾಮಿ, ಇದು ತುಂಬಾ ಹಳೆಯ ಕಾಲದ ನಾಲೆಗಳು. ಇವುಗಳನ್ನು ಜೀರ್ಣೋದ್ಧಾರ ಮಾಡಬೇಕಾದರೆ ೮ ಕೋಟಿ ರೂಪಾಯಿಗಳು ಬೇಕಾಗುತ್ತವೆ. ರಿಲೀಫ್ ಮೂಲಕ ಈ ಕೆಲಸವನ್ನು ಮಾಡಿಸಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾವು ಎಷ್ಟು ಕಡೆ ರಿಲೀಫ್ ಕೊಡುವುದಕ್ಕೆ ಸಾಧ್ಯ ? ಈ ಕೆಲಸವನ್ನು ರಿಲೀಫ್ ಮೂಲಕ ಮಾಡಿಸುವುದಕ್ಕಾಗುವುದಿಲ್ಲ. ನೀರಾವರಿ ಇಲಾಖೆಯಲ್ಲಿರುವ ಮೈನರ್‌ಟೇನೆನ್ಸ್ ಗ್ರಾಂಟ್ ಮೂಲಕ ಹಣವನ್ನು ಈ ಕೆಲಸಕ್ಕಾಗಿ ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರಿಂದಲೂ ಈ ವಿಷಯದ ಬಗ್ಗೆ ಮಾಹಿತಿಗಳನ್ನು ತರಿಸಿಕೊಂಡು ಕೆಲಸ ಮಾಡಿಸುತ್ತೇನೆ.

ಮಂಡ್ಯ ಕೆರೆಯನ್ನು ಒಡೆದು ನಿವೇಶನಗಳನ್ನಾಗಿ ಮಾಡುವ ಬಗ್ಗೆ

೧೪೪೯. ಶ್ರೀ ಎಸ್. ಡಿ. ಜಯರಾಂ (ಮಂಡ್ಯ).—ಮಾನ್ಯ ಅರಣ್ಯ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡ್ಯ ಕೆರೆಯನ್ನು ಒಣಗಿಸಿ ನಿವೇಶನಗಳನ್ನಾಗಿ ಮಾರ್ಪಡಿಸಿ ಮಂಡ್ಯ ನಗರದ ಬೆಳವಣಿಗೆಗೆ ಸಹಕರಿಸುವ ಯೋಜನೆ ಇದೆಯೇ ?

ಆ) ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ, ಮತ್ತು ಅದರ ಅಂದಾಜು ವೆಚ್ಚವೆಷ್ಟು ?